Water Supply and other amenities to the Villages newly added to Bangalore City Corporation

73. Sri T. R. SHAMANNA (Fort).—

Will the Minister of State for Municipal Administration be pleased to refer to replies given to Starred Question No. 515 on 3rd March 1970 and state:—

(*a*) whether the Bangalore City Corporation has deposited Rs. 20 lakhs for the purpose of providing water and other amenities to the villages newly added to it with the Bangalore Water Supply and Sewerage Board ;

(*b*) whether it is not a fact that an assurance was given to provide water facilites to Yediyur-Nagasandra (32nd Division) and Gavipura-Dasarahalli (31st Division) during 1970-71 ?

Sri B. M. PATIL (Minister of State for Municipal Administration).—

(*a*) Yes.

(*b*) Yes.

ಶ್ರೀ ಟಿ. ಆರ್. ಶಾಮಣ್ಣ.—ಈಗ 34 ಹಳ್ಳಿಗಳಿಗೆ ನೀರನ್ನು ಒದಗಿಸುವ ಬಗ್ಗೆ ಪ್ರಯಾರಿಟಿ ಲಿಸ್ಟ್ ಸಿದ್ಧವಾಗಿದೆ ಎಂಬುದು ಗೊತ್ತಿದೆ. ಈಗ ಯಡಿಯೂರು, ನಾಗಸಂದ್ರ ಮತ್ತು ಗವಿಪುರ ದಾಸರಹಳ್ಳಿಗಳಿಗೆ ನೀರಿಲ್ಲದೆ ಬಹಳ ತೊಂದರೆಯಾಗಿರುವುದರಿಂದ ಇದನ್ನು ಅದಷ್ಟು ಜಾಗ್ರತೆ ತೆಗೆದುಕೊಳ್ಳಬೇಕೆಂದು ವಾಟರ್ ಬೋರ್ಡಿಗೆ ಆದೇಶ ಕೊಡುತ್ತೀರಾ ?

† ಶ್ರೀ ಬಿ. ಎಂ. ಪಾಟೀರ್.—ವಾಟರ್ ಬೋರ್ಡಿನವರು ಕೆಲಸ ಇದೇ ವರ್ಷದಲ್ಲಿ" ಪ್ರಾರಂಭ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಹಳ್ಳಿಗಳಿಗೆ ನೀರು ಒದಗಿಸುವ ವಿಷಯದಲ್ಲಿ ಕೆಲವು ದಿವಸಗಳ ಹಿಂದೆ ಎಂ. ಎಲ್. ಎ. ಗಳನ್ನೊಳಗೊಂಡ ಒಂದು ಸಭೆಯು ವಾಟರ್ ಬೋರ್ಡ್ ಅಧಿಕಾರಿಗಳೊಂದಿಗೆ ನಡೆದಿತ್ತು. ಅದಕ್ಕೆ ನನಗೆ ಹೋಗಲಾಗಲಿಲ್ಲ. ಈ ಸಭೆಯಲ್ಲಿ ಯಶವಂತಪುರ ಮತ್ತು ಮತ್ತಿಕೆರೆ ಹಳ್ಳಿಗಳಿಗೆ ಬೋರ್‌ವೆಲ್ ಮಾಡಿ ನೀರು ಒದಗಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಅದರಿಂದ ಮೂಲತಃ ಸಾವಿರ ಜನರಿಗೆ ಏನೂ ಅನುಕೂಲ ವಾಗುವುದಿಲ್ಲ. ಆದ್ದರಿಂದ ಪೂರ್ತಿಯಾಗಿ ಆ ಹಳ್ಳಿಗಳ ಜನರಿಗೆ ವಾಟರ್ ಬೋರ್ಡಿನವರೇ ಈ ನೀರಿನ ಯೋಜನೆಯಿಂದ ನೀರನ್ನು ಕೊಡುವುದಕ್ಕೆ ಆದೇಶವನ್ನು ಕೊಡುತ್ತೀವೆಂದು ಭರವಸೆ ಕೊಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರ ಸೂಚನೆಯನ್ನು ನಾನು ವಾಟರ್ ಬೋರ್ಡಿನ ವರಿಗೆ ಕಳುಹಿಸುತ್ತೇನೆ, ನೀರನ್ನು ಮೇನ್ ಲೈನ್ ಮೂಲಕ ಕೊಡುವುದಕ್ಕೆ ಸಾಧ್ಯವಿದೆಯೇ ಅಥವಾ ಬೋರ್‌ವೆಲ್ ಮುಖಾಂತರ ಕೊಡುವುದಕ್ಕೆ ಸಾಧ್ಯವಿದೆಯೇ ಯಾವರೀತಿ ಕೊಡುವುದಕ್ಕೆ ಸಾಧ್ಯವಿದೆ ಎಂಬುದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಸ್. ಹಪೀದ್‌ಷಾ.—ಸ್ವಾಮಿ, ಮುನಿರೆಡ್ಡಿ ಪಾಳ್ಯಕ್ಕೆ ಮೇನ್ ಲೈನ್ ಹಾಕಿದ್ದರೂ ಸಹ ಅಲ್ಲಿ ವಾಟರ್ ಕನೆಕ್ಷನ್ ಕೊಟ್ಟಿಲ್ಲ. ಆದ್ದರಿಂದ ಅಲ್ಲಿ ಮೇನ್ ಕನೆಕ್ಷನ್‌ನಿಂದ ನೀರು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಆ ವಿವರಗಳು ಈಗ ನನ್ನ ಹತ್ತಿರ ಇಲ್ಲ. ಕಾರ್ಪೊರೇಷನ್ ಲಿಮಿಟ್‌ನಲ್ಲಿ ಯಾವುದೇ ಭಾಗದಲ್ಲಾಗಲೀ, ಎಲ್ಲೆಲ್ಲಿ ನೀರು ಕೊಟ್ಟಿಲ್ಲ ಆ ಪ್ರದೇಶಗಳಲ್ಲಿ ನೀರನ್ನು ಮೇನ್ ಲೈನ್‌ನಿಂದ ಕೊಡುವುದಕ್ಕೆ ಸಾಧ್ಯವಿದೆಯೇ ಅಥವಾ ಬೋರ್‌ವೆಲ್‌ನಿಂದ ಕೊಡುವುದಕ್ಕೆ

ಸಾಧ್ಯವಿದೆಯೇ ಎಂಬುದನ್ನು ಯಾವುದನ್ನು ಪರಿಶೀಲನೆ ಮಾಡಬೇಕು ಎಂದು ನಾನು ವಾಟರ್ ಬೋರ್ಡಿನವರಿಗೆ ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಇಡೀ ಮೈಸೂರು ರಾಜ್ಯದಲ್ಲಿ ಎಲ್ಲೆಲ್ಲ ದೊಡ್ಡ ದೊಡ್ಡ ನಗರಗಳಿವೆ ಅಲ್ಲೆಲ್ಲಾ ನೀರು ಪೂರೈಕೆ ಮಾಡುವುದಕ್ಕಾಗಿ ಪರ್ಕಾರದವರು ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೀರಾ ? ಒಂದು ವೇಳೆ ಅಂಥಾ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದರೆ ಅದನ್ನು ಎಷ್ಟು ವರ್ಷಗಳಲ್ಲಿ ಪೂರೈಸುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಮೈಸೂರು ರಾಜ್ಯದಲ್ಲಿ ಕೆಲವು ನಗರಗಳಲ್ಲಿ ಈಗಾಗಲೇ ನೀರು ಪೂರೈಕೆಗೆ ಸಂಬಂಧಪಟ್ಟ ಯೋಜನೆಗಳು ತಯಾರಾಗಿರತಕ್ಕವುಗಳು ಏನಿವೆ ಅವುಗಳನ್ನು ಕಾರ್ಯಗತ ಮಾಡಬೇಕೆಂದು ಮಾಡಿದ್ದೇವೆ. ಈಗಾಗಲೇ ಇರತಕ್ಕಂಥ ಯೋಜನೆಗಳನ್ನು ಸುಧಾರಣೆ ಮಾಡುತ್ತಿದ್ದೇವೆ. ಇಷ್ಟೇ ಅಲ್ಲದೆ ಎಲ್ಲಾ ಡಿವಿಜನರ್ ಕಮೀಷನರ್, ಡೆಪ್ಯುಟಿ ಕಮೀಷನರ್ ಮತ್ತು ಮುನಿಸಿಪಲ್ ಕಮೀಷನರಿಗೂ ನೀರು ಪೂರೈಕೆಯ ಬಗ್ಗೆ ಯೋಜನೆಗಳನ್ನು ತಯಾರು ಮಾಡಿ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ್.—ಈ ಯೋಜನೆಗಳನ್ನು ಎಷ್ಟು ದಿವಸಗಳಲ್ಲಿ ಕಾರ್ಯಗತ ಮಾಡುತ್ತೀರಿ ?

ಶ್ರೀ ಬಿ. ಎಂ. ಪಾಟೀಲ್.—ಅದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಬೆಂಗಳೂರು ನಗರ ಸಭೆಗೆ ಹೊಸದಾಗಿ ಸೇರಿಸಿರತಕ್ಕಂಥ ಗ್ರಾಮಗಳಿಗೆ ನೀರು ಸರಬರಾಜು ಮತ್ತು ಇನ್ನಿತರ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಬೆಂಗಳೂರು ಕಾರ್ಪೊರೇಷನ್ನಿನವರು 20 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ ಎಂದು ಹೇಳಿದ್ದೀರಿ, ಬೆಂಗಳೂರು ಕಾರ್ಪೊರೇಷನ್ನಿನವರು ವಾಟರ್ ಸಪ್ಲೈ ಮಾಡುವುದನ್ನು ಬೋರ್ಡಿಗೆ ಬಹಳ ದಿವಸಗಳ ಹಿಂದೆಯೇ ವಹಿಸಿ ಕೊಟ್ಟಿದ್ದರೂ ಸಹ ಗೋಪಾಲಸ್ವಾಮಿ ಕಾರೋನಿ, ಆಂಜನೇಯ ಬ್ಲಾಕ್, ಜಬ್ಬಾರ್ ಬ್ಲಾಕ್ ಮತ್ತು ನುಬೇದಾರ್ ಪಾಳ್ಯ ಈ ಪ್ರದೇಶಗಳಿಗೆ ನೀರಿನ ಸೌಲಭ್ಯವನ್ನು ಒದಗಿಸಿ ಕೊಟ್ಟಿಲ್ಲ. ಈ ಪ್ರದೇಶಗಳಲ್ಲಿ ಹರಿಜನರೇ ಜಾಸ್ತಿ ಇದ್ದಾರೆ. ಆದ್ದರಿಂದ ಆ ಪ್ರದೇಶಗಳಿಗೆ ಟಾಪ್ ಪ್ರಯಾರಿಟಿ ಕೊಟ್ಟು ಅಲ್ಲಿಗೆ ನೀರು, ಲೈಟು ಇತ್ಯಾದಿಗಳನ್ನು ಒದಗಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಕೆಲವು ಕಡೆ ಅನ್‌ಅಥರೈಜ್ಡ್ ಕನ್‌ಸ್ಟ್ರಕ್ಷನ್ ಇದೆ. ಅಂಥಾ ಕಡೆ ಇದನ್ನು ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಯಾವ ಯಾವ ಕಡೆ ಮನೆಗಳು ಕನ್‌ಸ್ಟ್ರಕ್ಟ್ ಆಗಿವೆ ಅಂಥಾ ಕಡೆ ಈ ಸೌಕರ್ಯಗಳನ್ನು ಕೊಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಪ್ಪ.—ಈಗ ಅನ್‌ಅಥರೈಜ್ಡ್ ಕನ್‌ಸ್ಟ್ರಕ್ಷನ್ ಆಗಿರುವ ಕಡೆ ತೆರಿಗೆಯನ್ನು ವಸೂಲು ಮಾಡಿಕೊಂಡು ಅಲ್ಲಿಯ ಜನಗಳಿಗೆ 4–5 ವರ್ಷಗಳಿಂದ ಯಾವ ಸೌಕರ್ಯವನ್ನು ಕೊಟ್ಟಿಲ್ಲ. ಅಂಥಾ ಪ್ರದೇಶಗಳಿಗೆ ನೀರಿನ ಸೌಕರ್ಯವನ್ನು ಒದಗಿಸುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಎಲ್ಲೆಲ್ಲ ರೆಗ್ಯುಲರೈಜ್ ಆಗಿದೆ ಅಲ್ಲೆಲ್ಲಾ ತೆರಿಗೆಯನ್ನು ವಸೂಲು ಮಾಡುತ್ತಾರೆ. ಮತ್ತು ಅಲ್ಲಿಗೆ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲ ಮೈನ್ ಲೈನ್‌ನಿಂದ ನೀರು ಕೊಡುವುದಕ್ಕೆ ಸಾಧ್ಯವಿದೆ ಅಲ್ಲಿ ಮೇನ್ ಲೈನಿನಿಂದ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎಲ್ಲಿ ಮೇನ್ ಲೈನಿನಿಂದ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಅಂಥಾ ಕಡೆ ಬೋರ್‌ವೆಲ್ ಹಾಕಿ ನೀರನ್ನು ಕೊಡಬೇಕಾಗುತ್ತವೆ. ಅದಕ್ಕಾಗಿ ಒಂದು ಫೇಜ್ಡ್ ಪ್ರೋಗ್ರಾಮ್ ಹಾಕಿಕೊಂಡಿದ್ದೇವೆ. ಅದರ ಪ್ರಕಾರ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ನೀರು ಪೂರೈಕೆ ಬಗ್ಗೆ ಎಲ್ಲೆಲ್ಲ ಹೊಸ ಯೋಜನೆಗಳನ್ನು ತೆಗೆದುಕೊಳ್ಳಬೇಕು ಮತ್ತು ಎಲ್ಲೆಲ್ಲ ವಾಟರ್ ಸಪ್ಲೈ ಇಂಪ್ರೂವ್ ಮಾಡಬೇಕು, ಎಕ್ಸ್‌ಪ್ಯಾನ್‌ಷನ್ ಮಾಡಬೇಕು ಅಂಥಾ ಕಡೆ ಪ್ಲಾನು ಮತ್ತು ಎಸ್ಟಿಮೇಟುಗಳನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಬೇಕು ಎಂದು ಸಂಬಂಧಪಟ್ಟ ಡಿವಿಜನಲ್ ಕಮೀಷನರ್, ಡೆಪ್ಯುಟಿ ಕಮೀಷನರ್, ಮತ್ತು ಮುನಿಸಿಪಲ್ ಪ್ರೆಸಿಡೆಂಟರಿಗೆ ಆದೇಶವನ್ನು ಕೊಟ್ಟಿದ್ದೇವೆ ಎಂದು ಹೇಳಿದರಿ, ನಮ್ಮ ಹಾಸನದ

(ಶ್ರೀ ಎಚ್. ಬಿ. ಜ್ವಾಲನಯ್ಯ)

ನೀರು ಪೂರೈಕೆ ಎಕ್ಸ್‌ಪ್ಯಾನಷನ್ ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಿ 6 ತಿಂಗಳಾಯಿತು. ಆದರೆ ಅದರ ಬಗ್ಗೆ ಇಲ್ಲಿಯವರೆಗೂ ಯಾವ ಒಂದು ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಎಲ್ಲೆಲ್ಲ ಪ್ಲಾನು ಮತ್ತು ಎಸ್ಟಿಮೇಟುಗಳು ತಯಾರಾಗಿ ಸರ್ಕಾರಕ್ಕೆ ಬಂದಿವೆ ಅವುಗಳ ಬಗ್ಗೆ ಬೇಗ ಶಿಫಾರಸ್ಸು ಮಾಡಬೇಕೆಂದು ನಲಕೆ ಕೊಟ್ಟಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹೊಸದಾಗಿ ಬೆಂಗಳೂರು ಕಾರ್ಪೊರೇಷನ್ನಿಗೆ ಸೇರಿದಂತಹ ಹಳ್ಳಿಗಳಿಗೆ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಯಾವಯಾವ ಗ್ರಾಮಗಳಿಗೆ ಆಗಬೇಕು ಎನ್ನುವುದನ್ನು ಒಂದು ಕಾರ್ಯಕ್ರಮದ ಪ್ರಕಾರ ನಡೆಸುತ್ತಿದ್ದೀರಾ ? ಮತ್ತು ಮಾನ್ಯ ಮಂತ್ರಿಗಳು ಈ ಗ್ರಾಮಗಳು ದುರವಸ್ಥೆಯನ್ನು ಖುದ್ದಾಗಿ ನೋಡಿ ಕುಡಿಯುವ ನೀರು ಮತ್ತು ಒಳ ಚರಂಡಿ ವ್ಯವಸ್ಥೆಯನ್ನು ಆದಷ್ಟು ಬೇಗ ಆ ಗ್ರಾಮಗಳಿಗೆ ಒದಗಿಸಿಕೊಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಈ ಬಗ್ಗೆ ಹೇಳಿದ್ದೇನೆ ಬೆಂಗಳೂರು ಕಾರ್ಪೋರೇಷನ್ನಿಗೆ 34 ಗ್ರಾಮಗಳನ್ನೇನು ಸೇರಿಸಿಕೊಂಡಿದ್ದೇವೆ, ಅವುಗಳು ಬಹಳ ಸುಧಾರಣೆಯಾಗಿವೆ. ನಾನು ಆ ಗ್ರಾಮಗಳಿಗೆ ಹೋಗಿ ನೋಡಿದ್ದೇನೆ ಅಲ್ಲಿ ಸಾಕಷ್ಟು ಇಂಪ್ರೂವ್‌ಮೆಂಟ್ ನಡೆಯುತ್ತಿದೆ. ನೀರು ಕೊಟ್ಟಿದ್ದೇವೆ, ರಸ್ತೆಗಳಿಗೆ ಆಸ್‌ಫಾಲ್ಟ್ ಮಾಡಿದ್ದೇವೆ, ಈ ಬಗ್ಗೆ ನಾವು ಒಂದು ಕನ್‌ನಲ್ಟೇಟೀವ್ ಕಮಿಟಿ ಮಾಡಿದ್ದೇವೆ. ಒಂದು ಫೇಜ್ಡ್ ಪ್ರೋಗ್ರಾಮ್ ಮಾಡಿದೆ ಅದರ ಪ್ರಕಾರ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಈಗ ತಾವು ಒಂದು ಫೇಜ್ಡ್ ಪ್ರೋಗ್ರಾಮ್ ಮಾಡಿದ್ದೇವೆ ಎಂದು ಈ ಸಭೆಗೆ ತಿಳಿಸಿದಿರಿ ಅದರ ಪ್ರಕಾರ ಈಗ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನೇನು ಈ ಗ್ರಾಮಗಳಿಗೆ ನೀರು ಸರಬರಾಜು ಇನ್ನಿತರ ಸೌಕರ್ಯಗಳನ್ನು ಒದಗಿಸಲು ಮಂಜೂರು ಮಾಡಿದ್ದೀರಿ ಅದರಲ್ಲಿ ಈ ಫೇಜ್ಡ್ ಪ್ರೋಗ್ರಾಮಿಗೆ ಇಲ್ಲಿವರೆಗೆ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹಣ ಉಳಿದಿದೆ ಎಷ್ಟು ವರ್ಷಗಳಲ್ಲಿ ಪ್ರೋಗ್ರಾಮ್ ಕಾರ್ಯಗತವಾಗುತ್ತದೆ, ಎಷ್ಟು ಹಳ್ಳಿಗಳಿಗೆ ಈ ಸೌಕರ್ಯಸಿಕ್ಕುತ್ತದೆ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಆಮುಗೋಡಿ, ತಾಯಪ್ಪನಪಾಳ್ಯ, ವೈಯ್ಯಾಳಕಾವಲು, ಕೇತಸಾರನ ಹಳ್ಳಿ, ಅಗ್ರಹಾರ, ನಾಗನಪಾಳ್ಯ ಇತ್ಯಾದಿ 11 ಹಳ್ಳಿಗಳಿಗೆ ನೀರನ್ನು ಕೊಟ್ಟಿದೆ, 1970-71ನೇ ಸಾಲಿಗೆ ಯಡಿಯೂರು, ಲಕ್ಕಸಂದ್ರ, ನಾಗಸಂದ್ರ, ಅಶೋಕನಗರ, ಜಪರಪ್ಪನ ಪಾಳ್ಯ, ಗವಿಪುರ, ದಾಸರಹಳ್ಳಿ ಇತ್ಯಾದಿ 14 ಹಳ್ಳಿಗಳಿಗೆ ನೀರನ್ನು ಕೊಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದೇವೆ.

Land granted to Sri K. T. Shamaiah Gowda in Sindhuvadi Village

108. Sri N. G. HALAPPA (Channagiri).—

Will the Minister for Revenue be pleased to state:—

(*a*) whether any land has been granted to Sri K. T. Shamaiah Gowda. Ex-M. L. C. in Sindhuvadi Village, Thirthahalli Taluk, Shimoga District ;

(*b*) if so, the date of grant, the survey number of the lands, the extent of land granted and whether the grant is in accordance with law that was obtaining at the time of grant ;

(*c*) the extent of land owned by Sri K. T. Shamaiah Gowda besides the land granted in question ;